ಲಿಟಲ್‌ರಾಕ್‌ಗೆ ಹೊರಟಿದ್ದ. ಎಲ್ಮೋರಾಕ್ಕೆ ಬಂದ ನಂತರ ಅವನು ಇದೇ ಮೊದಲಬಾರಿ ಹೊರಕ್ಕೆ ಹೋಗುತ್ತಿರುವುದು. ತಿಜೋರಿ ಒಡೆಯುವ ದಂಧೆಯನ್ನು ತೊರೆದು ಒಂದು ವರ್ಷವೇ ಆಗಿತ್ತು. ಹಾಗಂತ ಅವನಿಗೆ ಎಲ್ಲಿಲ್ಲದ ಧೈರ್ಯ ಬಂದಿತ್ತು.

ಉಪಹಾರ ಮುಗಿದಂತೆ ಆಡಮ್ಸನ ಪರಿವಾರ ಬ್ಯಾಂಕಿನ ಕಡೆಗೆ ಹೋಗಲು ತಯಾರಾಯಿತು. ಮಿಸ್ಟರ್ ಆಡಮ್ಸ್, ಆನ್ನಾಬೆಲ್, ಜಿಮ್ಮಿ, ಆನ್ನಾಬೆಲ್‌ಳ ವಿವಾಹಿತ ಅಕ್ಕ ಮತ್ತು ಅವಳ ಐದು ಮತ್ತು ಒಂಬತ್ತು ವರ್ಷದ ಮುದ್ದಾದ ಇಬ್ಬರು ಹೆಣ್ಣು ಮಕ್ಕಳು ಹೊರಡಲು ತಯಾರಾದರು. ಅವರು ಹೋಟೆಲನ್ನು ಹಾದು ಹೋಗುವಾಗ ಜಿಮ್ಮಿ ಒಳಗೆ ಹೋಗಿ ತನ್ನ ಸೂಟ್‌ಕೇಸನ್ನು ತಂದ. ಅವರೆಲ್ಲಾ ಬ್ಯಾಂಕಿನೆಡೆಗೆ ಹೊರಟರು. ಅಲ್ಲಿ, ಜಿಮ್ಮಿಯನ್ನು ಸ್ಟೇಶನಿಗೆ ಕರೆದೊಯ್ಯಲು ಕುದುರೆ ಗಾಡಿಯೊಂದು ತಯಾರಾಗಿತ್ತು. ಅವರೆಲ್ಲಾ, ಜಿಮ್ ಕೂಡ ಸೇರಿ, ಬ್ಯಾಂಕಿನೊಳಗೆ ಹೋದರು. ಮಿಸ್ಟರ್ ಆಡಮ್ಸರ ಭಾವಿ ಅಳಿಯನಿಗೆ ಬ್ಯಾಂಕಿನಲ್ಲಿ ತೆರೆದ ಸ್ವಾಗತವಿತ್ತು. ಸ್ಫುರದ್ರೂಪಿಯಾಗಿದ್ದ ಜಿಮ್ಮಿ ತನ್ನ ನಡವಳಿಕೆಯಿಂದ ಬ್ಯಾಂಕಿನೆಲ್ಲರ ವಿಶ್ವಾಸಗಳಿಸಿದ್ದ. ಜಿಮ್ಮಿ ಸೂಟುಕೇಸನ್ನು ಕೆಳಗಿಟ್ಟ. ಅವನ ಬಗಲಲ್ಲೇ ನಿಂತಿದ್ದ ಆನ್ನಾಬೆಲ್ ಜಿಮ್ಮಿಯ ಹ್ಯಾಟನ್ನು ತನ್ನ ತಲೆಯ ಮೇಲಿರಿಸಿ, ಬಳುಕುತ್ತಾ, 'ನಾನು ಹೇಗೆ ಕಾಣಿಸ್ತಿದ್ದೀನಿ ರಾಲ್ಫ್?' ಎನ್ನುತ್ತಾ ಸೂಟ್ಕೇಸನ್ನೂ ಎತ್ತಿಕೊಂಡಳು. ಅವಳು ಸಂತೋಷದ ಅಮಲಿನಲ್ಲಿ ತೇಲುತ್ತಿದ್ದಳು.

'ಸೂಟ್ಕೇಸಿನಲ್ಲಿ ಚಿನ್ನದ ಗಟ್ಟಿಗಳನ್ನು ಇಟ್ಟಿಲ್ಲ ತಾನೆ ರಾಲ್ಫ್? ಓಹ್ ಮೈ ಗಾಡ್! ಎಷ್ಟೊಂದು ಭಾರವಿದೆ!' ಎಂದಳು.

'ಅದರೊಳಗೆ ಪಾದರಕ್ಷೆಗಳ ಅಡಿಗೆ ಹೊಡೆಯುವ ಕಬ್ಬಿಣದ ಲಾಳಗಳಿದ್ದಾವೆ ಡಿಯರ್. ವಾಪಸ್ಸು ಮಾಡಲು ಕೊಂಡೊಯ್ಯುತ್ತಿದ್ದೇನೆ' ಎಂದ ಜಿಮ್ಮಿ.

ಎಲ್ಮೋರ್ ಬ್ಯಾಂಕಿನಲ್ಲಿ ಹೊಸದಾಗಿ ಆಧುನಿಕ ಲಾಕರನ್ನು ಅಳವಡಿಸಲಾಗಿತ್ತು. ಸಹಜವಾಗಿ ಮಿಸ್ಟರ್ ಆಡಮ್ಸನಿಗೆ ಹೊಸ ತಿಜೋರಿಯ ಬಗ್ಗೆ ಹೆಮ್ಮೆಯಿತ್ತು. ಮನೆಯವರೆಲ್ಲಾ ಅದನ್ನೊಮ್ಮೆ ನೋಡಬೇಕೆಂದು ಅವನ ಅಭಿಲಾಷೆಯಾಗಿತ್ತು. ತಿಜೋರಿ ಪೂರಾ ಹೊಸದಾಗಿರಲಿಲ್ಲ. ಲಾಕರ್ ರೂಮಿನ ಹಳೆಯ ಬಾಗಿಲನ್ನು ತೆಗೆದು ಹೊಸ ಆಧುನಿಕ ಬಾಗಿಲನ್ನು ಕೂರಿಸಲಾಗಿತ್ತು. ಮುಚ್ಚುವಾಗ ಹಿಡಿಯನ್ನು ಎಳೆದಾಗ ಒಮ್ಮೆಲೇ ಮೂರು ಮಜಬೂತಾದ ಮೂರು ಉಕ್ಕಿನ ಕೊಂಡಿಗಳು ಲಾಕ್ ಆಗುತ್ತಿದ್ದವು ಮತ್ತು ಅದು ಟೈಮ್ ಲಾಕಾಗಿತ್ತು. ಅದು ಹೇಗೆ ಕೆಲಸ ಮಾಡುತ್ತದೆಂದು ಮಿಸ್ಟರ್ ಆಡಮ್ಸ್ ಜಿಮ್ಮಿಗೆ ಪ್ರತ್ಯೇಕವಾಗಿ ವಿವರಿಸಿದರು. ಜಿಮ್ಮಿ ಕೇಳುತ್ತಿರುವವನಂತೆ ನಟಿಸಿದರೂ ಅವನ ಗಮನ ಅಲ್ಲಿರಲಿಲ್ಲ. ಹೆಣ್ಣು ಮಕ್ಕಳಾದ ಮೇ ಮತ್ತು ಅಗಾಥ ತಿಜೋರಿಯ ಮೇಲೆ ಮಿರಮಿರನೆ ಹೊಳೆಯುವ ಹಿಡಿ ಮತ್ತು ಹಿಂಭಾಗದ ಮೂರು ಕೊಂಡಿಗಳನ್ನು ನೋಡಿ ವಿಸ್ಮಯಗೊಂಡಿದ್ದರು.

ಅದೇ ಹೊತ್ತಿಗೆ ಬೆನ್‌ಪ್ರೈಸ್ ಬ್ಯಾಂಕಿನೊಳಗೆ ಪ್ರವೇಶಿಸಿದ. ಗ್ರಾಹಕರು ಮತ್ತು ಬ್ಯಾಂಕಿನವರನ್ನು ಪ್ರತ್ಯೇಕಿಸಲು ಮಧ್ಯೆ ಜಾಲರಿ ಇತ್ತು. ಕೌಂಟರಿನ ಮೇಲೆ ಮೊಣಕೈಯನ್ನೂರುತ್ತಾ ಅವನು ಮಿಸ್ಟರ್ ಆಡಮ್ಸನ ಪರಿವಾರವನ್ನೇ ನೋಡತೊಡಗಿದ. ಯಾರೋ ಕೇಳಿದ್ದಕ್ಕೆ, ಯಾರನ್ನೋ ಕಾಯುತ್ತಿದ್ದೇನೆಂದ.

ಅಷ್ಟರಲ್ಲಿ ಮಿಸ್ಟರ್ ಆಡಮ್ಸನ ಪರಿವಾರದಲ್ಲಿ ಏನೋ ಗೊಂದಲ ಶುರುವಾಯಿತು. ಹೆಂಗಸೊಬ್ಬಳು ಕಿರುಚಿಕೊಂಡಿದ್ದೂ ಹೊರಗೆ ಕೇಳಿಸಿತು. ಹಿರಿಯರೆಲ್ಲಾ ಮಾತಿನಲ್ಲಿ